**ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯಲ್ಲಿ ಪುನರಾವರ್ತಿತವಾಗುವ ಪ್ರಶ್ನೆಗಳು**

**ಪ್ರಶ್ನೆ 1 : ಈ ಯೋಜನೆಯ ಗುಣವೇನು/ಯಾವ ರೀತಿಯ ಯೋಜನೆ?**

ಈ ಯೋಜನೆಯು ಒಂದು ವರ್ಷದ ಅವಧಿಯದ್ದಾಗಿದ್ದು, ಪ್ರತಿ ವರ್ಷ ನವೀಕರಣಗೊಳಿಸಬಹುದಾಗಿರುತ್ತದೆ. ಇದರಲ್ಲಿ ಅಪಘಾತದಿಂದ ಉಂಟಾಗುವ ಸಾವು ಅಥವಾ ನ್ಯೂನತೆಗಳು ಒಳಗೊಳ್ಳುತ್ತವೆ.

**ಪ್ರಶ್ನೆ 2 : ಈ ಯೋಜನೆಯ ಅನುಕೂಲತೆಗಳು ಏನು ಮತ್ತು ಪಾವತಿಯಾಗುವ ಪ್ರೀಮಿಯಂ ಏನು?**

| | ಲಾಭದ ತಃಖ್ತೆ | ವಿಮಾ ಮೊತ್ತ |
|---|---|---|
| ಎ | ಮರಣ | ರೂ.2 ಲಕ್ಷ |
| ಬಿ | ಎರಡೂ ಕಣ್ಣುಗಳ ಸಂಪೂರ್ಣ ಹಾನಿ, ಅಥವಾ ಎರಡೂ ಕೈಗಳ ಅಥವಾ ಕಾಲುಗಳ ಸಂಪೂರ್ಣ ಹಾನಿ, ಅಥವಾ ಒಂದು ಕಣ್ಣಿನ ದೃಷ್ಟಿ ಹಾನಿ ಮತ್ತು ಒಂದು ಕೈ ಅಥವಾ ಕಾಲಿಗೆ ಹಾನಿ | ರೂ.2 ಲಕ್ಷ |
| ಸಿ | ಒಂದು ಕಣ್ಣಿನ ಸಂಪೂರ್ಣ ದೃಷ್ಟಿ ಹಾನಿ ಅಥವಾ ಒಂದು ಕೈ ಅಥವಾ ಕಾಲಿನ ಹಾನಿ | ರೂ.1 ಲಕ್ಷ |

ವಾರ್ಷಿಕ ರೂ.12/- ತಲಾ ಪ್ರತಿ ಸದಸ್ಯರಿಗೆ.

**ಪ್ರಶ್ನೆ 3 : ಪ್ರೀಮಿಯಂ ಪಾವತಿ ಮಾಡುವ ವಿಧಾನ?**

ಈ ಯೋಜನೆಯಲ್ಲಿ ಸದಸ್ಯರಾದ ನಂತರ ಪ್ರತಿ ವರ್ಷ ಅಂತಹ ಖಾತೆದಾರರ ಉಳಿತಾಯ ಖಾತೆಯಿಂದ ಆಟೋ ಡೆಬಿಟ್ ಯೋಜನೆ ಅಡಿಯಲ್ಲಿ ಪ್ರೀಮಿಯಂ ಅನ್ನು ಕಡಿತ ಮಾಡಲಾಗುತ್ತದೆ. ಸದಸ್ಯರು ಯೋಜನೆಯ ಚಾಲ್ತಿಯಲ್ಲಿರುವ ಪೂರ್ಣ ವರ್ಷಗಳಿಗೆ ಒಂದೇ ಸಮಯದಲ್ಲಿ ಪ್ರೀಮಿಯಂ ಪಾವತಿ ಮಾಡಬಹುದು. ಯೋಜನೆ ಚಾಲ್ತಿಯಲ್ಲಿ ಇರುವವರೆಗೂ ಸದಸ್ಯರು ಪ್ರೀಮಿಯಂ ಅನ್ನು ಪ್ರತಿ ವರ್ಷ ಅಟೋ ಡೆಬಿಟ್ ಮೂಲಕ ಪಾವತಿಸಲು ನಿರ್ದೇಶನ ನೀಡಬಹುದು. ಇದು ವರ್ಷದಿಂದ ವರ್ಷಕ್ಕೆ ಯೋಜನೆಯ ಅನುಭವದ ಪರಿಶೀಲನೆಯನ್ನು ಅವಲಂಬಿಸಿರುತ್ತದೆ.

**ಪ್ರಶ್ನೆ 4 : ಈ ಯೋಜನೆಯನ್ನು ಯಾರು ರೂಪಿಸಿರುತ್ತಾರೆ / ಜಾರಿಗೆ ತರುತ್ತಾರೆ:**

ಈ ಯೋಜನೆಯು ಪಬ್ಲಿಕ್ ಸೆಕ್ಟರ್ ಜನರಲ್ ಇನ್ಸೂರೆನ್ಸ್ ಕಂಪನಿಗಳು (ಪಿಎಸ್‌ಜಿಐಸಿ) ಮತ್ತು ಇತರೆ ಜನರಲ್ ಇನ್ಸೂರೆನ್ಸ್ ಕಂಪನಿಗಳು ಅಂದರೆ ಮೇಲ್ಕಂಡ ಯೋಜನೆಯ ಉದ್ದೇಶಗಳ ಮಾನ್ಯತೆ ಹೊಂದಿ ಬ್ಯಾಂಕಿನವರ ಜೊತೆಯಲ್ಲಿ ಸಹಭಾಗಿಯಾಗಿ ರೂಪಿಸತಕ್ಕದ್ದಾಗಿರುತ್ತದೆ. ಇದರಲ್ಲಿ ಭಾಗವಹಿಸುವ ಬ್ಯಾಂಕ್‌ಗಳು ತಮ್ಮ ಇಚ್ಛೆಯಂತೆ ಯಾವುದೇ ಇನ್ಸೂರೆನ್ಸ್ ಕಂಪನಿಯವರನ್ನು ತಮ್ಮ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ನೇಮಿಸಿಕೊಳ್ಳಬಹುದಾಗಿದೆ.

**ಪ್ರಶ್ನೆ 5 : ಈ ಯೋಜನೆಗೆ ಸದಸ್ಯರಾಗಲು ಅರ್ಹತೆಗಳು ಏನು?**

ಯಾವುದೇ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿರುವ 18 ವರ್ಷ (ತುಂಬಿರುವ) ಮತ್ತು 70 ವರ್ಷದ ಒಳಗಿನ ಯಾವುದೇ ವ್ಯಕ್ತಿಯು ಈ ಯೋಜನೆಯ ಫಲಾನುಭವಿಯಾಗಲು ಅರ್ಹರಾಗಿರುತ್ತಾರೆ ಮತ್ತು ಒಂದು ಪಕ್ಷ ಒಬ್ಬ ವ್ಯಕ್ತಿಯು ಒಂದು

ಅಥವಾ ಬೇರೆ ಬೇರೆ ಬ್ಯಾಂಕುಗಳಲ್ಲಿ ಒಂದಕ್ಕಿಂತ ಹೆಚ್ಚು ಉಳಿತಾಯ ಖಾತೆ ಹೊಂದಿದ್ದಲ್ಲಿ ಅಂತಹ ಸದಸ್ಯರು ಕೇವಲ ಒಂದು ಖಾತೆಯಲ್ಲಿ ಮಾತ್ರ ಈ ಯೋಜನೆಗೆ ಅರ್ಹರಾಗಿರುತ್ತಾರೆ.

**ಪ್ರಶ್ನೆ 6 : ನೋಂದಣಿಯ ಅವಧಿ ಮತ್ತು ವಿಧಾನ?**

ಸದರಿ ಯೋಜನೆಯು 1ನೇ ಜೂನ್ ರಿಂದ 31ನೇ ಮೇ 2016 ವರೆಗೂ ಒಂದು ವರ್ಷದ ಅವಧಿಯಾಗಿರುತ್ತದೆ. ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಅಟೋ ಡೆಬಿಟ್ ನಿರ್ದೇಶನದೊಂದಿಗೆ ಪ್ರತಿ ವರ್ಷ 31ನೇ ಮೇ ತಿಂಗಳ ಒಳಗಾಗಿ ಸಲ್ಲಿಸಬೇಕಾಗಿರುತ್ತದೆ ಮತ್ತು ಮುಂದುವರೆದ ಅವಧಿಯು 31ನೇ ಆಗಸ್ಟ್ 2015 ರವರೆಗೆ ಪ್ರಾರಂಬದ ವರ್ಷದಲ್ಲಿ ವಿಸ್ತರಿಸಬಹುದಾಗಿರುತ್ತದೆ. ಈ ದಿನಾಂಕದ ನಂತರ ನೋಂದಾಣಿ ಬಯಸುವವರು ಪ್ರೀಮಿಯಂನ ವಾರ್ಷಿಕ ಮೊತ್ತವನ್ನು ಒಮ್ಮೆಲೇ ನಿಯಮಾನುಸಾರವಾಗಿ ಪಾವತಿಸಿ ಸದಸ್ಯರಾಗಬಹುದು.

ಮೊದಲ ವರ್ಷದ ಅವಧಿಯ ನಂತರವೂ ಸದರಿ ಯೋಜನೆಯಲ್ಲಿ ಮುಂದುವರೆಯಲು ಇಚ್ಛಿಸುವ ಸದಸ್ಯರು ಪ್ರತಿ ವರ್ಷದ 31ನೇ ಮೇ ತಿಂಗಳಿನ ಒಳಗಾಗಿ ಈ ಬಗ್ಗೆ ತಿಳಿಸತಕ್ಕದ್ದು. ಒಂದು ವೇಳೆ ವಿಳಂಬವಾಗಿ ತಿಳುವಳಿಕೆ ನೀಡಿದ್ದಲ್ಲಿ, ವಾರ್ಷಿಕ ಪ್ರೀಮಿಯಂ ಅನ್ನು ಒಟ್ಟಾಗಿ ಪಾವತಿ ಮಾಡುವುದರ ಮೂಲಕ ನಿಬಂದೆನೆಗಳಿಗೆ ಅನುಸಾರವಾಗಿ ನವೀಕರಿಸಬಹುದು.

**ಪ್ರಶ್ನೆ 7 : ಒಂದು ವೇಳೆ ಪ್ರಾರಂಭಿಕ ವರ್ಷದಲ್ಲಿ ಸದಸ್ಯರಾಗದೇ ಇದ್ದವರೂ ಸಹ ಮುಂದಿನ ವರ್ಷಗಳಲ್ಲಿ ಸದಸ್ಯರಾಗಬಹುದೇ?**

ಹೌದು, ಆಟೋ ಡೆಬಿಟ್ ಯೋಜನೆಯ ಮೂಲಕ ಪ್ರೀಮಿಯಂ ಪಾವತಿ ಮಾಡಿದ ನಂತರ ಸದಸ್ಯರಾಗಬಹುದು. ಅದೇ ರೀತಿ ಮುಂದಿನ ವರ್ಷಗಳಲ್ಲಿ ಹೊಸ ಅರ್ಹ ಪ್ರವೇಶಾತಿಗಳನ್ನು ಮಾಡಲಾಗುವುದು

**ಪ್ರಶ್ನೆ 8 : ಒಂದು ವೇಳೆ ಮಧ್ಯದಲ್ಲಿ ಬಿಟ್ಟುಹೋದ ಸದಸ್ಯರೂ ಸಹ ಪುನಃ ಈ ಯೋಜನೆಗೆ ಸೇರಬಹುದೇ?**

ಸದರಿ ಯೋಜನೆಯ ಮಧ್ಯದಲ್ಲಿ ಯಾವುದೇ ಕಾರಣಕ್ಕೆ ಬಿಟ್ಟುಹೋದ ಸದಸ್ಯರು ಪಾವತಿ ಮಾಡಬೇಕಾದ ವಾರ್ಷಿಕ ಪ್ರೀಮಿಯಂ ಅನ್ನು ಪಾವತಿ ಮಾಡಿ ಪುನಃ ಸೇರಬಹುದಾಗಿದ್ದು, ಆ ಸಮಯದಲ್ಲಿ ವಿಧಿಸುವ ನಿಯಮಗಳನ್ನು ಪಾಲನೆ ಮಾಡಬೇಕಾಗಿರುತ್ತದೆ.

**ಪ್ರಶ್ನೆ: 9 : ಈ ಯೋಜನೆಯ ಮಾಸ್ಟರ್ ಪಾಲಿಸಿ ಹೋಲ್ಡರ್ ಯಾರು?**

ಯೋಜನೆಯಲ್ಲಿ ಭಾಗಿಯಾಗುವ ಬ್ಯಾಂಕುಗಳು ಮಾಸ್ಟರ್ ಪಾಲಿಸಿ ಹೋಲ್ಡರ್ ಆಗಿರುತ್ತಾರೆ. ಇದರಲ್ಲಿ ಭಾಗವಹಿಸುವ ಬ್ಯಾಂಕುಗಳ ಜತೆಯಲ್ಲಿ ಜನರಲ್ ಇನ್ಸ್ಯೂರೆನ್ಸ್ ಕಂಪನಿಯವರು ಸರಳ ಮತ್ತು ಚಂದಾದಾರ ಸ್ನೇಹಿ ಆಡಳಿತ ಮತ್ತು ಕ್ಲೇಮ್ ಸೆಂಟಲ್‌ಮೆಂಟ್ ಪ್ರಕ್ರಿಯೆಯನ್ನು ಅಂತಿಮಗೊಳಿಸುತ್ತಾರೆ.

**ಪ್ರಶ್ನೆ 10 : ಅಪಘಾತ ವಿಮೆಯು ಯಾವ ಸಂದರ್ಭದಲ್ಲಿ ನಿಂತು ಹೋಗುತ್ತದೆ.**

ಈ ಕೆಳಕಂಡ ಯಾವುದಾದರೂ ಒಂದು ಸಂದರ್ಭದಲ್ಲಿ ಸದರಿ ಅಪಘಾತ ವಿಮಾ ಯೋಜನೆಯು ಅಂತ್ಯಗೊಳ್ಳುತ್ತದೆ.

೧)	70 ವರ್ಷ ಪೂರ್ಣಗೊಳಿಸಿದ ನಂತರ.

೨)	ಬ್ಯಾಂಕಿನಲ್ಲಿ ಖಾತೆಯನ್ನು ರದ್ದುಗೊಳಿಸಿದಲ್ಲಿ ಅಥವಾ ಸದರಿ ವಿಮಾ ಯೋಜನೆಗೆ ಅವಶ್ಯಕವಾದಷ್ಟು ಮೊತ್ತವನ್ನು ಖಾತೆಯಲ್ಲಿ ಹೊಂದಿಲ್ಲದೇ ಇದ್ದಲ್ಲಿ.

೩)	ಒಂದು ವೇಳೆ ಸದಸ್ಯರು ಒಂದಕ್ಕಿಂತ ಹೆಚ್ಚಿನ ಖಾತೆ ಮತ್ತು ಪ್ರೀಮಿಯಂ ಅನ್ನು ಹೊಂದಿದ್ದಲ್ಲಿ, ವಿಮೆಯು ಕೇವಲ ಒಂದು ಖಾತೆಗೆ ಮಾತ್ರ ಸೀಮಿತಗೊಂಡು ಉಳಿದ ಪ್ರೀಮಿಯಂ ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**ಪ್ರಶ್ನೆ 11: ವಿಮಾ ಕಂಪನಿಯ ಮತ್ತು ಬ್ಯಾಂಕ್ ರವರ ಪಾತ್ರವೇನು?**

(೧) ಈ ಯೋಜನೆಯು ಪಬ್ಲಿಕ್ ಸೆಕ್ಟರ್ ಜನರಲ್ ಇನ್ಸೂರೆನ್ಸ್ ಕಂಪನಿಗಳು (ಪಿಎಸ್‌ಜಿಐಸಿ) ಮತ್ತು ಇತರೆ ಜನರಲ್ ಇನ್ಸೂರೆನ್ಸ್ ಕಂಪನಿಗಳು ಅಂದರೆ ಮೇಲ್ಕಂಡ ಯೋಜನೆಯ ಉದ್ದೇಶಗಳನ್ನು ಹೊಂದಿ ಬ್ಯಾಂಕಿನವರ ಜೊತೆಯಲ್ಲಿ ಸಹಭಾಗಿಯಾಗಿ ರೂಪಿಸತಕ್ಕದ್ದಾಗಿರುತ್ತದೆ.

(೨) ಖಾತೆದಾರರಿಂದ ವಾರ್ಷಿಕ ಪ್ರೀಮಿಯಂ ಅನ್ನು ಒಂದೇ ಬಾರಿಗೆ ಪಾವತಿ ಮಾಡಿಸಿಕೊಳ್ಳುವ ಜವಾಬ್ದಾರಿಯು ಸಂಬಂದಪಟ್ಟ ಬ್ಯಾಂಕ್‌ನದ್ದಾಗಿರುತ್ತದೆ ಮತ್ತು ಅವುಗಳನ್ನು ಪಾವತಿಯ ದಿನಾಂಕದ ಮುಂಚಿತವಾಗಿ ಅಟೋ ಡೆಬಿಟ್ ಪ್ರಕ್ರೀಯೆಯ ಪಾವತಿ ಮಾಡಿಸಿಕೊಳ್ಳತಕ್ಕದ್ದು.

(೩) ಸದರಿ ಬ್ಯಾಂಕುಗಳು ಪ್ರವೇಶದ ಅರ್ಜಿ/ಆಟೋ ಡೆಬಿಟ್ ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಪಡೆದುಕೊಂಡು ತಮ್ಮ ಬಳಿ ಇಟ್ಟುಕೊಳ್ಳತಕ್ಕದ್ದು. ಕ್ಲೇಮುಗಳ ಸಮಯದಲ್ಲಿ ಅವುಗಳನ್ನು ಅಗತ್ಯವಿದ್ದಲ್ಲಿ ಹಾಜರುಪಡಿಸುವುದು. ಯಾವುದೇ ಸಮಯದಲ್ಲಾದರೂ ಸಹ ಇನ್ಸೂರೆನ್ಸ್ ಕಂಪನಿಯವರು ಸದರಿ ದಾಖಲಾತಿಗಳಿಗಾಗಿ ಕೋರಿಕೆ ಸಲ್ಲಿಸಬಹುದು.

**ಪ್ರಶ್ನೆ 12 :** ಪ್ರೀಮಿಯಂ ಅನ್ನು ಯಾವ ರೀತಿ ಪರಿಗಣಿಸಲಾಗುತ್ತದೆ?

೧)	ವಿಮಾ ಕಂಪನಿಗೆ ವಿಮಾ ಪ್ರೀಮಿಯಂ : ಪ್ರತಿ ಸದಸ್ಯರಿಗೆ ತಲಾ ರೂ.10/- ವಾರ್ಷಿಕ

೨)	ಬಿಸಿ/ಮೈಕ್ರೋ/ಕಾರ್ಪೊರೇಟ್/ಏಜೆಂಟ್ ರವರಿಗೆ ಮರುಪಾವತಿ : ರೂ.1/- ವಾರ್ಷಿಕ ಪ್ರತಿ ಸದಸ್ಯರಿಗೆ

೩)	ಬ್ಯಾಂಕುಗಳಿಗೆ ಆಡಳಿತಾತ್ಮಕ ವೆಚ್ಚ ಮರುಪಾವತಿ : ರೂ.1/- ವಾರ್ಷಿಕ ಪ್ರತಿ ಸದಸ್ಯರಿಗೆ.

**ಪ್ರಶ್ನೆ : 13 : ಈ ಯೋಜನೆಯು ಸದಸ್ಯರ ಇನ್ನಾವುದೇ ಇನ್ಸೂರೆನ್ಸ್ ಯೋಜನೆಯ ಜೊತೆಗೆ ಬರುತ್ತದೆಯೇ?**

ಹೌದು